ಗೋವಿಂದರಾಜ್ ಬೂದಗುಂಪಾ ಸಾರಥ್ಯದಲ್ಲಿ....

09-Disember-2024

GB NEWS ಕನ್ನಡ

SEARCHING OF TRUTH...............

ಕರ್ನಾಟಕ ಪ್ರಾದೇಶಿಕ ಡಿಜಿಟಲ್ ಪತ್ರಿಕೆ- ಪ್ರತಿ ಸೋಮವಾರ ನಿಮ್ಮ ಮುಂದೆ





# ಅಧಿಕಾರಿಗಳ ಟ್ಯಾಗ್ ಕಂಡುಹಿಡಿದ ಶಿವರಾಜ್ ತಂಗಡಗಿ ಜನಸಾಮಾನ್ಯರ ಸಮಸ್ಯೆಗಳನ್ನು ಮರೆತುಬಿಟ್ಟರಾ?






# ಡಿವೋರ್ಸ್ ಇದೇನು ಮಕ್ಕಳಾಟವೇ

# ತರಾತುರಿಯಲ್ಲಿ ಅಧಿವೇಶನ ಮುಗಿಸಲು ಹೊರಟಿದೆಯೇ ಕಾಂಗ್ರೆಸ್





# ಚಿಕಿತ್ಸೆಗು ಮುನ್ನ ತಿಮ್ಮಪ್ಪನಿಗೆ ಮುಡಿ ಕೊಟ್ಟ ಶಿವರಾಜ್ ಕುಮಾರ್ ಮತ್ತು ದಂಪತಿ




# ಡಿವೋರ್ಸ್ ಇದೇನು ಮಕ್ಕಳಾಟವೇ

**ಗೋವಿಂದರಾಜ್ ಬೂದಗುಂಪಾ :**

ಸಮಾಜದಲ್ಲಿ ಏನಾಗುತ್ತಿದೆ? ಯಾಕೆ ಹೀಗೆ ಮದುವೆಗಳು ಮುರಿದುಬೀಳುತ್ತಿವೆ,? ಹಿರಿಯರ ಅಭಿಪ್ರಾಯಗಳಿಗೆ ಮನ್ನಣೆಯೇ ದೊರಕುತ್ತಿಲ್ಲ? ಕಿರಿಯರು ಏಕೆ ದುಡುಕು ನಿರ್ಧಾರ ಕೈಗೊಳ್ಳುತ್ತಿದ್ದಾರೆ? ತಮ್ಮ ಭಿನ್ನ ನಿಲುವುಗಳನ್ನು ಸರಿಪಡಿಸಿಕೊಳ್ಳಲಾಗದಷ್ಟು ಯುವಮನಸ್ಸು ಕೆಟ್ಟಿದೆಯೇ?

ಎಂತಹುದ್ದೇ ಸಮಸ್ಯೆಗಳಿದ್ದರೂ ಮಾತುಕತೆ ಮೂಲಕ ಪರಿಹಾರ ಸಾಧ್ಯವಿದೆ, ಸಣ್ಣ ಪುಟ್ಟ ವಿಚಾರಗಳಿಗೆ ನ್ಯಾಯಾಲಯಗಳಿಗೆ ಕಿರಿಯ ವಯಸ್ಸಿನವರು ಬರುತ್ತಿರುವುದು ಹೆಚ್ಚಾಗುತ್ತಿದೆ, ಮನೆಯಲ್ಲಿ ಬಗೆಹರಿಸುವಂಥ ವಿಚಾರಗಳು ಕೋರ್ಟ್ ಕಟಕಟೆ ಏರುತ್ತಿದೆ, ಮೊದಲೆಲ್ಲಾ ವರ್ಷಕ್ಕೆ 10 ವಿವಾಹ ವಿಚ್ಚೇದನ ಸಂಬಂಧಿತ ವ್ಯಾಜ್ಯಗಳು ಕೋರ್ಟ್‌ನಲ್ಲಿ ಕಂಡು ಬರುತ್ತಿದ್ದರೆ ಈಗ ಮಡಿಕೇರಿ ನ್ಯಾಯಾಲಯವೊಂದರಲ್ಲಿಯೇ ತಿಂಗಳಿಗೆ 10-15 ವಿವಾಹ ವಿಚ್ಚೇದನ ಸಂಬಂಧಿತ ಕೇಸ್ ಗಳು ಬರುತ್ತಿರುವುದು ಆತಂಕಕಾರಿಯಾಗಿದೆ ಎಂದು ಮಡಿಕೇರಿ ವಕೀಲರ ಸಂಘದ ಅಧ್ಯಕ್ಷ ಎಂ ಎ ನಿರಂಜನ್ ಕಳವಳ ವ್ಯಕ್ತಪಡಿಸುತ್ತಾರೆ,

ಮದುವೆಯಾಗಿ ವರ್ಷ ಬೇಡ, ತಿಂಗಳೂ ಬೇಡ, ವಾರವೂ ಆಗಿರುವುದಿಲ್ಲ, ಕೈಬೆರಳಣಿಕೆಯಷ್ಟು ದಿನಗಳಲ್ಲಿಯೇ ವಿಚ್ಚೇದನಕ್ಕೆ ನವ ದಂಪತಿ ನಿರ್ಧಾರಿಸುತ್ತಿರುವುದು ನಿಜಕ್ಕೂ ಆತಂಕಕಾರಿ,

ಕೆಲವೇ ವರ್ಷಗಳ ಹಿಂದೆ ಬಹುತೇಕ ಮಂದಿ ಅವಿಭಕ್ತ ಕುಟುಂಬ ವ್ಯವಸ್ಥೆಯಲ್ಲಿ ಬಾಳುತ್ತಿದ್ದರು, ಮನೆಯೊಂದರಲ್ಲಿ 10-12 ಮಂದಿ ಒಟ್ಟಿಗೆ ಜೀವನ ಸಾಗಿಸುತ್ತಿದ್ದರು, ಇಂಥ ಮನೆಗಳಲ್ಲಿ ಕುಟುಂಬ ಸದಸ್ಯರೆಲ್ಲರ ನಗು, ಸಂಭ್ರಮ ಸದಾ ಕಂಡುಬರುತ್ತಿತ್ತು, ಜಗಳವಾಡಲೂ ಆಸ್ಪದವೇ ಇಲ್ಲದಂತೆ ಎಲ್ಲರೂ ಒಮ್ಮನಸ್ಸಿನಿಂದ ಜೀವಿಸುತ್ತಿದ್ದರು, ಅಕಸ್ಮಾತ್ ಯಾವುದೇ ಸಮಸ್ಯೆ ದಂಪತಿ ಮಧ್ಯೆ ಎದುರಾದರೂ ಹಿರಿಯರ ಸಮ್ಮುಖದಲ್ಲಿ ಅಂತಹ ಸಮಸ್ಯೆಗಳಿಗೆ ಪರಿಹಾರ ನೀಡಲಾಗುತ್ತಿತ್ತು, ಹಿರಿಯರ ಬುದ್ದಿವಾದ ಕೇಳಿ ಕಿರಿಯರೂ ತಮ್ಮಲ್ಲಿನ ಭಿನ್ನ ಅಭಿಪ್ರಾಯಗಳನ್ನು ಸರಿಪಡಿಸಿಕೊಂಡು ಮುಂದೆ ಸಾಗುತ್ತಿದ್ದರು,

ಸಿಟ್ಟು ಹೆಚ್ಚಾಯಿತೇ, ಪತಿ ಪತ್ನಿ ಮಧ್ಯೆ ಸಂಘರ್ಷ ಜೋರಾಯಿತೇ,, ಹೆಚ್ಚೆಂದರೆ ಪತ್ನಿ ತನ್ನ ತವರು ಮನೆಗೆ ಹೋಗಿಬಿಡುತ್ತಿದ್ದಳು, ಎಷ್ಟು ದಿನ? ಹೆಚ್ಚೆಂದರೆ 1 ವಾರ ಪೋಷಕರ ಮನೆಯಲ್ಲಿದ್ದು ಮನಸ್ಸು ಹಗುರಾದ ಮೇಲೆ ಮತ್ತೆ ಗಂಡನ ಮನೆಗೆ ಸಂಭ್ರಮದಿಂದಲೇ ಬರುತ್ತಿದ್ದಳು, ಅಥವಾ ಮುನಿಸಿಕೊಂಡು ಮನೆ ಬಿಟ್ಟು ತೆರಳಿದ್ದ ಪತ್ನಿಯನ್ನು ಪತಿಯೇ ಹೋಗಿ ವಾಪಾಸ್ ಕರೆದುಕೊಂಡು ಬರುತ್ತಿದ್ದ, ತಪ್ಪೇನಿಲ್ಲ, ತಪ್ಪು ಯಾರದ್ದೂ ಅಲ್ಲ, ಅಥವಾ ತಪ್ಪನ್ನು ಇಂಥವರಿಂದಲೇ ನಿರ್ಧರಿಸಲಾಗದಂತೆ ಸಾಮಾಜಿಕ ವ್ಯವಸ್ಥೆಗಳೂ ಬದಲಾಗುತ್ತಿದೆ, ಹೀಗಾಗಿಯೇ ವಿಚ್ಚೇದನ ಎಂಬುದು ವಿಶೇಷ ವಿಚಾರವಾಗದೇ ಬಹಳ ಸಾಮಾನ್ಯ ಎಂಬಂತಾಗಿದೆ,

ಯುವತಿಯರಿಗೆ ಉದ್ಯೋಗ ನೀಡಿದ್ದೇ ತಪ್ಪು, ಕೈಗೆ ಸಂಬಳ ಬಂದದ್ದೇ ತಡ, ಗಂಡನ ಮಾತು ಕೇಳದ ಪತ್ನಿ ತನ್ನ ದುಡ್ಡು- ತನ್ನ ಬದುಕು ಎಂಬ ಅಹಂ ಬೆಳೆಸಿಕೊಂಡು ಗಂಡನಿಗೆ , ಹಿರಿಯರ ಮಾತಿಗೆ ಗೌರವ ನೀಡುತ್ತಿಲ್ಲ, ಅದರಲ್ಲಿಯೂ ಅಧಿಕ ವೇತನ ಪಡೆಯುವ ಪತ್ನಿಯಲ್ಲಿ ಇಂಥ ದುಡುಕು ನಿರ್ಧಾರ ಹೆಚ್ಚಾಗಿದೆ ಎಂಬ ವಾದ ಬಹುತೇಕ ಕಡೆ ಸಾಮಾನ್ಯವಾಗಿ ಕೇಳಿಬರುತ್ತಿದೆ, ಯುವತಿಯ ಮೇಲೆ ಎಲ್ಲಾ ತಪ್ಪುಗಳನ್ನು ಏಕಾಏಕಿ ಹೊರಿಸುವ ಪುರುಷ ಸಮಾಜದ ಹುನ್ನಾರವೂ ಇದರಲ್ಲಿ ಅಡಗಿದಂತಿದೆ,

ಈಗಿನ ಯುವಕರಿಗೆ ಜೀವನದ ಮೌಲ್ಯ ತಿಳಿದಿಲ್ಲ, ಸಂಸಾರ ನಿಭಾಯಿಸುವುದೇ ಗೊತ್ತಿಲ್ಲ, ಪತ್ನಿಯನ್ನು ಹೇಗೆ ನೋಡಿಕೊಳ್ಳಬೇಕು ಎಂಬುದರ ಅರಿವಿಲ್ಲ, ಉದ್ಯೋಗ, ಗೆಳೆಯರ ಸಹವಾಸದಲ್ಲಿ ಮನೆ, ಪತ್ನಿಯನ್ನು ಮರೆತ ಪರಿಣಾಮವೇ ಈ ರೀತಿಯ ವಿಚ್ಚೇದನಗಳಿಗೆ ಕಾರಣ ಎಂಬುದು ಯುವಕರ ಮೇಲಿರುವ ಆರೋಪ,ಅನೇಕ ಉದಾಹರಣೆ ಗಮನಿಸಿದಾಗ ಎರಡೂ ವಿಚಾರಗಳೂ ಸರಿಯಾಗಿದೆ ಎನಿಸಬಹುದು, ಪತಿ ಪತ್ನಿ ಇಬ್ಬರೂ ಉದ್ಯೋಗದಲ್ಲಿ ತಲ್ಲೀನರಾದ ಪರಿಣಾಮ ವೈಯಕ್ತಿಕ ಜೀವನದ ಬಗ್ಗೆ ಗಮನ ನೀಡಲು ಸಮಯವೇ ಸಿಕ್ಕುತ್ತಿಲ್ಲ, ಸಿಕ್ಕಿದರೂ ಅಹಂ ಎಂಬ ರಾಕ್ಷಸ ಮನದೊಳಗೆ ಬೃಹತ್ ರೂಪತಳೆದು ವಿಜೃಂಭಿಸಿದಾಗ ಸ್ವಾಭಿಮಾನ ಎಂಬುದೇ ಪ್ರಧಾನವಾದಾಗ ವಿಚ್ಚೇದನವೇ ಸೂಕ್ತ ಎಂಬ ತಪ್ಪು ನಿರ್ಧಾರವು ಗೆಲವು ಸಾಧಿಸುತ್ತದೆ,


ಆಧುನೀಕತೆಯ ಭರಾಟೆಯಲ್ಲಿ ಸಮಾಜವೇ ದಿಕ್ಕುತಪ್ಪುತ್ತಿದೆ ಎಂಬ ವ್ಯಾಪಕ ದೂರುಗಳಿರುವ ಕಾಲಘಟ್ಟದಲ್ಲಿ, ನವವಿವಾಹಿತರಲ್ಲಿ ತಾಳಮೇಳವೇ ಮಾಯವಾಗಿ ನಾನೊಂದು ತೀರ, ನೀನೊಂದು ತೀರ ಎಂಬಂತಾಗಿ ಜೀವಿಸಬೇಕಾದ ಜೀವಗಳು ಬದುಕಿನಲ್ಲಿ ಮಾರು ದೂರ ಸಾಗುವ ಬದಲಿಗೆ ವಿಮುಖವಾಗುವ ತೀರ್ಮಾನ ಕೈಗೊಳ್ಳುವಂತಾಗಿದೆ,

ಪತಿ - ಪತ್ನಿ ಒಂದೇ ನಾಣ್ಯದ ಎರಡು ಮುಖಗಳು, ಇವರೀರ್ವರೂ ಜೋಡೆತ್ತುಗಳಂತೆ ಜೀವನ ರಥದಲ್ಲಿ ಪಯಣಿಸಬೇಕೆಂಬ ಚಿಂತನೆ ಕಾಣೆಯಾಗುತ್ತಿದೆ, ಹಿರಿಯರ ಉಪದೇಶ ಗೋರ್ಕಲ್ಲ ಮೇಲೆ ನೀರು ಸುರಿದಂತಾಗಿದೆ,



ಹಿತೋಪದೇಶ ಕೇಳಲು, ಸಲಹೆ ಪಡೆಯಲು, ಯುವಪೀಳಿಗೆ ತಯಾರಾಗಿಲ್ಲ, ಅಷ್ಟೊಂದು ತಾಳ್ಮೆಯೂ ಅವರಲ್ಲಿಲ್ಲ, ತಮ್ಮನ್ನು ಈ ಹಂತಕ್ಕೆ ತರಲು ಪೋಷಕರು ಪಟ್ಟಿರುವ ಶ್ರಮದ ಅರಿವೂ ಅವರಿಗಿಲ್ಲ, ಮದುವೆಯ ಮಹತ್ವ, ಬಂಧುಗಳ ಹಾರೈಕೆಯ ಪ್ರಾಮುಖ್ಯತೆ, ತಾಳಿಯ ಬಂಧ, ವಿವಾಹದ ಸಂಪ್ರದಾಯಕ್ಕೆ ನೀಡಬೇಕಾದ ಆದ್ಯತೆಗಳನ್ನು ತಿಳಿದುಕೊಳ್ಳುವಲ್ಲಿ ಯುವದಂಪತಿ ಅಥವಾ ನವಜನಾಂಗ ವಿಫಲವಾಗಿದೆ, ಪಕ್ಕದ ಮನೆಗೆ ಬಂದಷ್ಟೇ ಸರಾಗವಾಗಿ ಗಂಡನ ಮನೆಯಿಂದ ವಿಚ್ಚೇದನ ಪಡೆದುಕೊಂಡೆ ಎಂದು ಬ್ಯಾಗ್ ಸಹಿತ ಮರಳುವ ಮಗಳನ್ನು ನೋಡಿ ಪೋಷಕರ ಮನಸ್ಸು ಎಷ್ಟು ನೊಂದು ಹೋದೀತು? ಪತ್ನಿಯನ್ನು ಬಿಟ್ಟುಬಿಟ್ಟೆ ಎಂದು ದೊಡ್ಡ ಸಾಧನೆಯಂತೆ ಹೇಳುವ ಮಗನ ನಿರ್ಧಾರಕ್ಕೆ ಕಕ್ಕಾಬಿಕ್ಕಿಯಾಗುವ ಹೆತ್ತವರ ಸಂಕಟ ಹೇಗೆ ಅರ್ಥವಾದೀತು, ಜೀವನವೀಡಿ ಸಂಪಾದಿಸಿದ ಹಣದಲ್ಲಿ ಲಕ್ಷಗಟ್ಟಲೆ ವೆಚ್ಚ ಮಾಡಿ ನೂರಾರು ಜನರನ್ನು ಆಹ್ವಾನಿಸಿ ನೆರವೇರಿಸಲಾದ ವಿವಾಹಕ್ಕೆ ಆದ ಖರ್ಚು ಈ ರೀತಿ ವ್ಯರ್ಥವಾದರೆ ಯಾವ ಹೃದಯಕ್ಕೆ ನೋವಾಗದೇ ಇರಲು ಸಾಧ್ಯ?

ಒಂದೇ ಸೂರಿನಡಿ, ಒಂದೇ ಮನೆಯಲ್ಲಿ ಸಂತೋಷದಿಂದ ಬಾಳಿ ಬದುಕಬೇಕಾದ ಜೋಡಿ ಮಾತು ತಪ್ಪಿದಂತೆ, ಜಗಳ ಜೋರಾದಂತೆ, ವೈಮನಸ್ಸುಗಳು ಹೆಚ್ಚಾದಂತೆ ಪೈಪೋಟಿಗೆ ಬಿದ್ದಂತೆ ತೆಗೆದುಕೊಳ್ಳುತ್ತಿರುವ ನಿರ್ಧಾರವೇ - ಡಿವೋರ್ಸ್, ಹೇಗೆ ಸರಿಪಡಿಸುವುದು ಇಂಥ ಮನಸ್ಥಿತಿಯನ್ನು, ಹೇಗೆ ನಿವಾರಿಸುವುದು ಇಂಥ ಪರಿಸ್ಥಿತಿಯನ್ನು, ?



# ಅಧಿಕಾರಿಗಳ ಟ್ಯಾಗ್ ಕಂಡುಹಿಡಿದ ಶಿವರಾಜ್ ತಂಗಡಗಿ

## ಜನಸಾಮಾನ್ಯರ ಸಮಸ್ಯೆಗಳನ್ನು ಮರೆತುಬಿಟ್ಟರಾ?



**ತ್ರೈಮಾಸಿಕ ಕೆ ಡಿ ಪಿ ಸಭೆಗಳಲ್ಲಿ ಜಿಲ್ಲೆಯ ಸಮಗ್ರ ಅಭಿವೃದ್ಧಿಯ ಬಗ್ಗೆ ಚಿಂತನೆ ಆಗಬೇಕು, ಮತ್ತು ಸಮಸ್ಯೆಗಳ ಚರ್ಚೆ ಆಗಬೇಕು, ಅಭಿವೃದ್ಧಿಗೆ ಪೂರಕವಾದ ಮತ್ತು ಅಭಿವೃದ್ಧಿಶೀಲ ಸಭೆಯಾಗಿ ಮಾರ್ಪಾಡಾಗಬೇಕು, ಆದರೆ ದುರಂತ ಅಂದರೆ ವಿಷಯವಲ್ಲದ ವಿಷಯಗಳು ಚರ್ಚೆ ಆಗುತ್ತಿರುವುದು ನಾಚಿಕೆಗೇಡಿನ ಸಂಗತಿ.**

**ಇತ್ತೀಚಿಗೆ ಕೊಪ್ಪಳ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಕೆಡಿಪಿ ಸಭೆ ನಡೆಯಿತು, ಈ ಸಂದರ್ಭದಲ್ಲಿ ಸಚಿವರು ಅಧಿಕಾರಿಗಳ ಕಾರ್ಯವೈಕರಿಗಳು ಹೇಗಿದೆ ಅನ್ನೋದನ್ನ ಪರಮರ್ಷಿಸುವುದನ್ನು ಬಿಟ್ಟು ಅವರು ಟ್ಯಾಗ್ ಹಾಕಿಕೊಂಡಿಲ್ಲ ಅನ್ನುವ ವಿಷಯವನ್ನೇ ದೊಡ್ಡದು ಎಂಬಂತೆ ವಾತಾವರಣ ಸೃಷ್ಟಿ ಮಾಡಿದರು, ಶಿಸ್ತಿನ ವಿಷಯದಲ್ಲಿ ಅವರು ಹೇಳಿದ್ದು ಸರಿಯಾಗಿರಬಹುದು, ಆದರೆ ಅಧಿಕಾರಿಗಳನ್ನು ಪರಮಾರ್ಶಿಸಬೇಕು ಅದು ಅಭಿವೃದ್ಧಿಯಲ್ಲಿ ಮತ್ತು ಜನಸಾಮಾನ್ಯರೊಂದಿಗಿನ ಒಡನಾಟದಲ್ಲಿ ಹೇಗಿದ್ದಾರೆ ಅನ್ನುವುದನ್ನು ಕಂಡು ಕೊಳ್ಳಬೇಕು, ಇದು ಮುಖ್ಯ ವಿಷಯ.**

**ಆದರೆ ಅವರಿಗೆ ಕಂಡಿದ್ದು ಅವರ ಕೊರಳಲ್ಲಿ ಗುರುತಿನ ಚೀಟಿಯ ಟ್ಯಾಗ್ ಇಲ್ಲದಿರುವುದು! ಚರ್ಚಿಸಬೇಕಾದ ವಿಷಯಗಳು ಸಾಕಷ್ಟಿವೆ ಅನ್ನುವುದು ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ್ ತಂಗಡಗಿ ಅವರಿಗೆ ಗೊತ್ತಿಲ್ಲವೇ? ಅನ್ನುವ ಪ್ರಶ್ನೆ ಮೂಡುತ್ತೆ.**

ಸ್ಥಳೀಯ ಸಮಸ್ಯೆಗಳು, ಜನರ ಬವಣೆಗಳ ಬಗ್ಗೆ ಪ್ರಧಾನವಾಗಿ ಚರ್ಚೆಯಾಗುತ್ತಿಲ್ಲ. ಪ್ರತಿ ಚುನಾವಣೆ ಬಂದಾಗ ನೀರಾವರಿ ವಿಷಯ ಕೊಪ್ಪಳ ಜಿಲ್ಲೆಯಲ್ಲಿ ಪ್ರಮುಖವಾಗಿ ಚರ್ಚೆಯಾಗುತ್ತಿತ್ತು. ಎಲ್ಲ ರಾಜಕೀಯ ಪಕ್ಷಗಳ ನಾಯಕರು ಇದೇ ವಿಷಯ ಮುಂದಿಟ್ಟು ಅಧಿಕಾರದ ಗದ್ದುಗೆಯೇರಲು ಕಸರತ್ತು ಮಾಡುತ್ತಿದ್ದರು. ಆದರೆ ಕೆಡಿಪಿ ಸಭೆಗಳಲ್ಲಿ ಚರ್ಚೆ ಆಗಬೇಕಾದಂತಹ ಇಂತಹ ಗಂಭೀರ ವಿಷಯಗಳು ಚರ್ಚೆ ಆಗುತ್ತಿಲ್ಲ.

ಅನೇಕ ವರ್ಷಗಳಿಂದ ಬಹದ್ದೂರ್ ಬಂಡಿ ಏತ ನೀರಾವರಿ, ಅಳವಂಡಿ-ಬೇಟಗೇರಿ ಏತ ನೀರಾವರಿ, ಸಿಂಗಟಾಲೂರು ಯೋಜನೆಗಳು ಪೂರ್ಣಗೊಂಡಿಲ್ಲ.

ತುಂಗಭದ್ರಾ ಜಲಾಶಯದಲ್ಲಿ ಹೂಳಿನ ಸಂಗ್ರಹದಿಂದ ಉಂಟಾಗುವ ನೀರಿನ ಸಂಗ್ರಹಣೆ ಸಾಮರ್ಥ್ಯದ ಕೊರತೆ ನಿವಾರಿಸಲು ಕನಕಗಿರಿ ಸಮೀಪದ ನವಲಿ ಬಳಿ ಸಮಾನಾಂತರ ಜಲಾಶಯ ನಿರ್ಮಾಣಕ್ಕೆ ಹಿಂದಿನ ಬಿಜೆಪಿ ಸರ್ಕಾರ ₹1,000 ಕೋಟಿ ಘೋಷಿಸಿತ್ತು. ಇದು ಘೋಷಣೆಗೆ ಸೀಮಿತವಾಗಿದ್ದು, ಕಾಮಗಾರಿಯ ಬಗ್ಗೆ ಯಾವ ಕೆಲಸವೂ ಆಗಿಲ್ಲ. ಮತಬೇಟೆಯಲ್ಲಿ ಚರ್ಚೆಯೂ ಆಗುತ್ತಿಲ್ಲ.

ಕೃಷ್ಣಾ ನದಿಯಿಂದ ನೀರು ತಂದು ಕೆರೆಗಳನ್ನು ತುಂಬಿಸುವ ಯೋಜನೆ, ಭಾನಾಪುರದಲ್ಲಿ ಟಾಯ್ ಕ್ಲಸ್ಟರ್ ಬೃಹತ್ ಕೈಗಾರಿಕೆಯಿದ್ದರೂ ಸ್ಥಳೀಯ ಯುವಕರಿಗೆ ಲಭಿಸದ ಹೆಚ್ಚಿನ ಉದ್ಯೋಗವಕಾಶ, ಬಾಕಿ ಉಳಿದ ರೈಲ್ವೆ ಕಾಮಗಾರಿ ಪೂರ್ಣಗೊಳಿಸುವುದು, ಕೊಪ್ಪಳ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಭವಿಷ್ಯದ ಕಾರ್ಯತಂತ್ರ ಸೂಚಿ ಹೇಗಿರಬೇಕು? ಎನ್ನುವ ಯಾವ ಅಂಶಗಳು ಚರ್ಚೆಯಾಗುತ್ತಿಲ್ಲ. ಇದರಲ್ಲಿ ಹಲವು ಕಾರ್ಯಗಳನ್ನು ರಾಜ್ಯ ಸರ್ಕಾರವೇ ಮಾಡಬೇಕಾಗಿದ್ದರೂ ಕೇಂದ್ರದಿಂದಲೂ ಅನುದಾನ ತಂದು ನೆರವಾಗುವ ಅಗತ್ಯವೂ ಇದೆ.

ಕೊಪ್ಪಳದಲ್ಲಿ ವಿಮಾನ ನಿಲ್ದಾಣ ನಿರ್ಮಾಣವಾಗಬೇಕು ಎನ್ನುವುದು ಜಿಲ್ಲೆಯ ಜನರ ಕನಸು. ಒಂದೂವರೆ ವರ್ಷದ ಹಿಂದೆ ಭಾರತ ವಿಮಾನನಿಲ್ದಾಣದ ಪ್ರಾಧಿಕಾರದ ಅಧಿಕಾರಿಗಳು ಜಿಲ್ಲೆಗೆ ಭೇಟಿ ನೀಡಿ ಸ್ಥಳವನ್ನು ಪರಿಶೀಲನೆ ಮಾಡಿದರೂ ಅಂತಿಮ ನಿರ್ಧಾರಕ್ಕೆ ಬಂದಿಲ್ಲ. ಕೊಪ್ಪಳದ ಭಾಗ್ಯನಗರದ ಕೂದಲೋದ್ಯಮ, ಸಾಂಪ್ರದಾಯಿಕ ಕಲಾತ್ಮಕ ಸೀರೆಗಳು, ಕಿನ್ನಾಳ ಕರಕುಶಲ ಕಲೆ, ತೋಟಗಾರಿಕೆ, ಕೊಪ್ಪಳ ಕೇಸರ್ ಮಾವು ಹೀಗೆ ಅನೇಕ ಕಾರಣಗಳಿಂದ ಕೊಪ್ಪಳ ಜಿಲ್ಲೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡಿದೆ. ಹನುಮ ಉದಯಿಸಿದ ನಾಡು ಎನ್ನುವ ಕಾರಣಕ್ಕೆ ಅಂಜನಾದ್ರಿಗೆ ವಿದೇಶಗಳಿಂದ ಪ್ರವಾಸಿಗರು ಬರುತ್ತಾರೆ. ನೆರೆಯಲ್ಲಿ ಪ್ರವಾಸೋದ್ಯಮ ಹಬ್ ಹಂಪಿಯಿದ್ದು ಈ ಎಲ್ಲ ಕಾರಣಕ್ಕೆ ಕೊಪ್ಪಳಕ್ಕೆ ವಿಮಾನ ನಿಲ್ದಾಣದ ಅಗತ್ಯವಿದೆ. ಆದರೆ ಯಾವ ಸಮಸ್ಯೆಗಳು ಸಚಿವರ ಕಣ್ಣಿಗೆ ಕಾಣುತ್ತಿಲ್ಲ, ಅಧಿಕಾರಿಗಳ ಗುರುತಿನ ಟ್ಯಾಗ್ ಮಾತ್ರ ಕಂಡಿತು ಅಂದರೆ ಅಚ್ಚರಿಯ ಸಂಗತಿ!.

# ತಂತ್ರಜ್ಞಾನ ಹಿತ ಮಿತವಾಗಿದ್ದರೆ ಚೆನ್ನ

**ಯಂತ್ರಗಳು ನಮ್ಮನ್ನು ಯಾಂತ್ರಿಕವಾಗಿಸುತ್ತವೆ, ನಮ್ಮ ಸಂವೇದನೆಗಳನ್ನು ನಾಶಮಾಡುತ್ತವೆ, ನಮ್ಮ ಸೃಜನಶೀಲ ಪ್ರತಿಭೆಗಳನ್ನು ಕುಂಠಿತಗೊಳಿಸುತ್ತವೆ, ಯಾಂತ್ರಿಕ ಕ್ರಮಬದ್ಧತೆ, ಏಕರೂಪತೆ ಮತ್ತು ಬೇಸರವನ್ನು ನಮ್ಮ ಮೇಲೆ ಹೇರುತ್ತವೆ, ನಮ್ಮ ಬಯಕೆಗಳನ್ನು ಮತ್ತು ಆಸೆಗಳನ್ನು ಹೆಚ್ಚಿಸುತ್ತವೆ ಮತ್ತು ನಮ್ಮನ್ನು ಸ್ವಾರ್ಥಿ, ದುರಾಸೆಯ ಮತ್ತು ಕ್ರೂರರನ್ನಾಗಿ ಮಾಡುತ್ತವೆ.**



ನಾವು ಪ್ರತಿದಿನ ಬದಲಾಗುತ್ತಿರುವ ತಂತ್ರಜ್ಞಾನದ ಯುಗದಲ್ಲಿದ್ದೇವೆ. ವಿಜ್ಞಾನ ಮತ್ತು ತಂತ್ರಜ್ಞಾನದ ಅನುಕೂಲಗಳು ಇರುವಂತೆ ಅನಾನುಕೂಲಗಳು ಸಹಾ ಉಂಟು. ಆದರೆ ಇದರಿಂದ ದೂರವಿರುವುದು ಮೂರ್ಖತನವೇ ಸರಿ. ಇದನ್ನು ನಮ್ಮ ಬದುಕಿನಲ್ಲಿ ಹಿತಮಿತವಾಗಿ ಅಳವಡಿಸಿಕೊಂಡರೆ ನಮ್ಮ ಬದುಕು ಮತ್ತೂ ಚೆನ್ನಾಗುವುದರಲ್ಲಿ ಸಂಶಯವಿಲ್ಲ.

ವಿಜ್ಞಾನವು ಹಲವಾರು ಮಾರಕ ರೋಗಗಳಿಗೆ ಅದ್ಭುತ ಪರಿಹಾರಗಳನ್ನು ತಂದಿದೆ. ವೈದ್ಯಕೀಯ ಕ್ಷೇತ್ರದಲ್ಲಿ ಮಾಡಿದ ಅಗಾಧ ಸುಧಾರಣೆಗಳು ನಮ್ಮ ಜೀವಿತಾವಧಿಯನ್ನು ಹೆಚ್ಚಿಸಲು ಮತ್ತು ಶಿಶು ಮರಣ ಪ್ರಮಾಣವನ್ನು ಕಡಿಮೆ ಮಾಡಲು ಸಹಾಯ ಮಾಡಿವೆ. ನಮ್ಮ ಜೀವನವು ಆರೋಗ್ಯಕರ ಮತ್ತು ದೀರ್ಘವಾಗಿದೆ. ಆಧುನಿಕ ಔಷಧ ಮತ್ತು ಶಸ್ತ್ರಚಿಕಿತ್ಸೆ ದಿನದಿಂದ ದಿನಕ್ಕೆ ಹೆಚ್ಚು ಹೆಚ್ಚು ದೈಹಿಕ ಮತ್ತು ಮಾನಸಿಕ ಅಸ್ವಸ್ಥತೆಗಳನ್ನು ಗೆಲ್ಲುತ್ತಿದೆ. ಉತ್ತಮ ಆರೋಗ್ಯ ಮತ್ತು ದೀರ್ಘಾಯುಷ್ಯದ ಸಂತೋಷವನ್ನು ನಾವು ಈಗ ತಿಳಿದಿದ್ದೇವೆ ಮತ್ತು ಅನುಭವಿಸುತ್ತೇವೆ.

ಒಂದು ದೇಶದ ಮುನ್ನಡೆಯನ್ನು ಗುರುತಿಸುವುದು ಅಲ್ಲಿನ ಜನರ ಹಾಗೂ ಬಾಣಂತಿ-ಮಗುವಿನ ಆರೋಗ್ಯದ ಮೇಲೆ.

ಮುಂಚೆ ಅನೇಕ ತಾಯಂದಿರು ಮಗುವನ್ನು ಹೆತ್ತು ಕಣ್ಣು ಮುಚ್ಚುತ್ತಿದ್ದರು. ಈಗ ಆ ಸಂಖ್ಯೆ ಗಮನಾರ್ಹವಾಗಿ ಕಡಿಮೆಯಾಗಿದೆ. ಆದರೆ ಅದೇ ಸಮಯಕ್ಕೆ ನೈಸರ್ಗಿಕವಾಗಿ ಮಗುವನ್ನು ಹಡೆಯಲು ಬಹುತೇಕ ಜನರು ಇಷ್ಟ ಪಡದೆ ಶಸ್ತ್ರಚಿಕಿತ್ಸೆಯ ಮೊರೆ ಹೋಗುತ್ತಾರೆ. ಇದರಿಂದ ನವಜಾತ ಶಿಶುವಿನ ದೇಹದಲ್ಲಿ ಉತ್ಪತ್ತಿಯಾಗುವ ಅನೇಕ ರಾಸಾಯನಗಳು ಕಡಿಮೆ ಆಗುತ್ತದೆ ಹಾಗೂ ತಾಯಿಗೆ ಚೇತರಿಸಿಕೊಳ್ಳುವ ಸಮಯ ಜಾಸ್ತಿ ಹಿಡಿಯುತ್ತದೆ. ಯಾಂತ್ರೀಕರಣ, ಉತ್ತಮ ಬೀಜಗಳು, ಉತ್ತಮ ನೀರಾವರಿ ತಂತ್ರಗಳು ಮತ್ತು ಕೀಟ ನಿಯಂತ್ರಣದ ಆವಿಷ್ಕಾರವು ಜಮೀನುಗಳಲ್ಲಿ ಉತ್ಪಾದಕತೆಯ ಮಟ್ಟವನ್ನು ಹೆಚ್ಚಿಸಿವೆ. ಮೊದಲಿನಂತೆ ಬೆಳೆ ಹಾಳಾಗಿ ರೈತರು ಕಷ್ಟ ಪಡುವುದು ಕಡಿಮೆಯಾಗಿದೆ. ಆದರೆ ನಮ್ಮ ಆಹಾರದಲ್ಲಿ ರಾಸಾಯನಿಕಗಳು ಜಾಸ್ತಿಯಾಗಿ ಅದರಿಂದ ಆರೋಗ್ಯದ ಮೇಲೆ ಬಹಳಷ್ಟು ಪರಿಣಾಮ ಉಂಟಾಗುತ್ತಿದೆ.



ಸಾರಿಗೆಯಲ್ಲಿ, ರೈಲ್ವೆ, ಆಧುನಿಕ ಸಾಗರ ಲೈನರ್, ಜೆಟ್ ಪ್ಲೇನ್ ಮತ್ತು ಮೋಟಾರ್ ವಾಹನಗಳು ನಮ್ಮ ಜೀವನವನ್ನು ಹೆಚ್ಚು ಆರಾಮದಾಯಕವಾಗಿಸಿವೆ ಮತ್ತು ಆಧುನಿಕ ವಾಣಿಜ್ಯ ಅಭಿವೃದ್ಧಿ ಮತ್ತು ಕೈಗಾರಿಕೀಕರಣಕ್ಕೆ ಉತ್ತಮ ಸಾಧ್ಯತೆಗಳನ್ನು ಒದಗಿಸಿವೆ. ಅದೇ ಸಮಯಕ್ಕೆ ಕಲುಷಿತ ನೀರು, ಗಾಳಿ ವಾತಾವರಣವನ್ನು ಹದಗೆಡಿಸಿವೆ, ಶಬ್ದ , ವಾಯು ಮಾಲಿನ್ಯಕ್ಕೆ ಕಾರಣವಾಗಿವೆ ಹಾಗೂ ಕಾರ್ಖಾನೆಗಳು ಕೊಳೆಗೇರಿಗಳಿಗೆ ದಾರಿ ಮಾಡಿ ಕೊಟ್ಟಿವೆ.

ಇತ್ತೀಚಿನ ದಿನಗಳಲ್ಲಿ ತಂತ್ರಜ್ಞಾನವು ಸಂವಹನವನ್ನು ಹೆಚ್ಚು ಸರಳವಾಗಿಸಿದೆ. ತಂತ್ರಜ್ಞಾನದಲ್ಲಿ ವ್ಯಾಪಕವಾದ ಬೆಳವಣಿಗೆಯಿಂದಾಗಿ ಮನುಷ್ಯನು ಬಹಳಷ್ಟು ಬೆಳೆದಿದ್ದಾನೆ. ಆದರೆ ಯಂತ್ರಗಳು ನಿರುದ್ಯೋಗಕ್ಕೆ ಕಾರಣವಾಗಿವೆ. ಯಂತ್ರಗಳು ನಮ್ಮನ್ನು ಯಾಂತ್ರಿಕವಾಗಿಸುತ್ತವೆ, ನಮ್ಮ ಸಂವೇದನೆಗಳನ್ನು ನಾಶಮಾಡುತ್ತವೆ, ನಮ್ಮ ಸೃಜನಶೀಲ ಪ್ರತಿಭೆಗಳನ್ನು ಕುಂಠಿತಗೊಳಿಸುತ್ತವೆ, ಯಾಂತ್ರಿಕ ಕ್ರಮಬದ್ಧತೆ, ಏಕರೂಪತೆ ಮತ್ತು ಬೇಸರವನ್ನು ನಮ್ಮ ಮೇಲೆ ಹೇರುತ್ತವೆ, ನಮ್ಮ ಬಯಕೆಗಳನ್ನು ಮತ್ತು ಆಸೆಗಳನ್ನು ಹೆಚ್ಚಿಸುತ್ತವೆ ಮತ್ತು ನಮ್ಮನ್ನು ಸ್ವಾರ್ಥಿ, ದುರಾಸೆಯ ಮತ್ತು ಕ್ರೂರರನ್ನಾಗಿ ಮಾಡುತ್ತವೆ.

ನಮ್ಮ ನೈತಿಕ ಮತ್ತು ಆಧ್ಯಾತ್ಮಿಕ ಪ್ರಗತಿಯು ನಮ್ಮ ವೈಜ್ಞಾನಿಕ ಪ್ರಗತಿಯೊಂದಿಗೆ ಸಾಗಲು ವಿಫಲವಾಗಿದೆ. ವಿಜ್ಞಾನವನ್ನು ನಮ್ಮ ಸೇವಕರಾಗಿ ಬಳಸುವ ಬದಲು ನಮ್ಮನ್ನು ದುರುಪಯೋಗಪಡಿಸಿಕೊಳ್ಳಲು ನಾವು ಅವಕಾಶ ನೀಡಿದ್ದೇವೆ.

ಭೌಗೋಳಿಕ ಅಂತರವು ನಿಸ್ಸಂದೇಹವಾಗಿ ಕಣ್ಮರೆಯಾಯಿತು, ಆದರೆ ಮನುಷ್ಯನ ಮನಸ್ಸು ಮತ್ತು ಹೃದಯಗಳ ನಡುವಿನ ಕಂದಕ ಹೆಚ್ಚಾಗಿದೆ. ಯಂತ್ರಗಳು ಮನುಷ್ಯನಿಗೆ ವಿರಾಮವನ್ನು ನೀಡಿವೆ, ಆದರೆ ಮನುಷ್ಯನು ತನ್ನ ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಹಾಳುಮಾಡುವ ಅಗ್ಗದ ಮತ್ತು ಅಸಭ್ಯ ಮನರಂಜನೆಯನ್ನು ಪಡೆಯಲು ಅದನ್ನು ದುರುಪಯೋಗಪಡಿಸಿಕೊಳ್ಳುತ್ತಾನೆ.

ವಿಜ್ಞಾನವು ನಮ್ಮ ಕೈಯಲ್ಲಿ ಪರಮಾಣು ಬಾಂಬ್, ಮಾರ್ಗದರ್ಶಿ ಕ್ಷಿಪಣಿ ಮತ್ತು ರಾಸಾಯನಿಕ ಮತ್ತು ಜೈವಿಕ ಯುದ್ಧದ ಸಾಧನಗಳಂತಹ ಅದ್ಭುತ ಆಯುಧಗಳನ್ನು ಇರಿಸಿದೆ. ಇದರಿಂದ ಮಾನವ ಮತ್ತೊಬ್ಬನನ್ನು ಕೊಲ್ಲಲು, ನಿಯಂತ್ರಿಸಲು ಅನುಕೂಲವಾಗಿದೆ. ಆರ್ಥಿಕವಾಗಿ ದುರ್ಬಲವಾಗಿರುವ ದೇಶಗಳು , ಹಿಂದುಳಿದ ದೇಶಗಳಲ್ಲಿ ಕೂಡ ಶಸ್ತ್ರಗಳಿಗಾಗಿ ಸಾಕಷ್ಟು ಹಣ ವ್ಯಯವಾಗುತ್ತಿದೆ. ಇದೇ ಮೊತ್ತವನ್ನು ಪ್ರಗತಿಗಾಗಿ ಉಪಯೋಗಿಸಿದ್ದಾರೆ ಎಷ್ಟು ಜನರ ಬದುಕು ಹಸನಾಗುತ್ತಿತ್ತು.

ವೈಜ್ಞಾನಿಕ ಆವಿಷ್ಕಾರಗಳು ಅದರಲ್ಲೂ ಕಂಪ್ಯೂಟರ್ ಆವಿಷ್ಕಾರವು ನಮ್ಮ ಜೀವನವನ್ನೇ ಬದಲಾಯಿಸಿದೆ. ಆದರೆ ಒಂದು ಕುಟುಂಬದಲ್ಲಿ ಜನರು ಒಟ್ಟಿಗೆ ಬಾಳಲಾರದೆ, ನೆರೆಹೊರೆಯವರನ್ನು ಮಾತನಾಡಿಸದೆ ಸಾಮಾಜಿಕ ಜಾಲತಾಣಗಳಲ್ಲಿ ತಮ್ಮನ್ನು ತಾವೇ ಮರೆತು ತೊಡಗಿಸಿಕೊಂಡಿದ್ದಾರೆ. ಸಮಾಜ, ಕೌಟುಂಬಿಕ ವ್ಯವಸ್ಥೆಯಲ್ಲಿ ಸಾಕಷ್ಟು ತೊಂದರೆಗಳು ಆಗುತ್ತಿವೆ. ಇಂಟರ್ನೆಟ್ ಬಳಕೆಯಿಂದ ಉಪಯೋಗ, ದುರುಪಯೋಗ ಎಲ್ಲವೂ ಸಮಪ್ರಮಾಣದಲ್ಲಿ ನಡೆಯುತ್ತಿವೆ. ಆದುದರಿಂದ ಎಲ್ಲವೂ ಹಿತಮಿತವಾಗಿದ್ದರೆ ಚೆನ್ನ.

# ಉರಗ ಲೋಕದ ಕೌತುಕವನ್ನೇ 'ವರ'ವಾಗಿಸಿಕೊಂಡ ಡಾ. ಗಿರಿ






ಪಶ್ಚಿಮ ಘಟ್ಟದ ದಟ್ಟ ಅರಣ್ಯಗಳಲ್ಲಿ ತಿಳಿ ಹಸಿರು ಬಣ್ಣದಲ್ಲಿ ಕಪ್ಪು-ಕೇಸರಿ ಬಣ್ಣದ ಮಚ್ಚೆಗಳುಳ್ಳ ಹಾವುಗಳ ಪ್ರಭೇದವೊಂದಿದೆ. ಈ ಹಾವುಗಳ ಹೆಸರೇನು ಗೊತ್ತೇ? 'ಡೆಂಡರ್‌ಲ್ಯಾಪಿಸ್ ಗಿರಿ'! ಇದರಲ್ಲಿ 'ಗಿರಿ' ಎಂಬ ಹೆಸರು ಅವುಗಳನ್ನು ಕಂಡುಹಿಡಿದ ಸಂಶೋಧಕರದ್ದು. ಅವರೇ ಡಾ.ವರದ ಗಿರಿ. ಉರಗ ಪ್ರಭೇದವನ್ನು ಸಂಶೋಧಿಸಿದ ಸಾಧನೆಗೆ ಮನ್ನಣೆಯಾಗಿ ಅವರ ಹೆಸರು ಉರಗ ಜಾತಿಯ ವೈಜ್ಞಾನಿಕ ಹೆಸರಿನೊಂದಿಗೆ ಸೇರ್ಪಡೆಯಾಗಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಮಾನ್ಯತೆ ಪಡೆದಿದೆ.

ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲೂಕಿನ ಅಂಕಲಿ ಗ್ರಾಮದ ಡಾ. ವರದ ಗಿರಿ, ಉರಗ ಹಾಗೂ ಸರೀಸೃಪಗಳ ಲೋಕದಲ್ಲಿ ಹೊಸತನ್ನು ಕಾಣಲು ಸದಾ ಕಾತರರಾದವರು. ಅವರ ಬಹುವರ್ಷದ ತಪಸ್ಸಿನ ಫಲವೆಂಬಂತೆ ಪಶ್ಚಿಮ ಘಟ್ಟದ ದಟ್ಟಾರಣ್ಯದಲ್ಲಿ ಅವರು ಸಂಶೋಧಿಸಿದ ಅಪರೂಪದ ತಳಿಯ ಹಾವುಗಳ ಜಾತಿಗೆ 'ಡೆಂಡರ್‌ಲ್ಯಾಪಿಸ್ ಗಿರಿ' ಎಂಬ ಹೆಸರನ್ನಿರಿಸಲಾಗಿದ್ದು, ಅದು ವೈಜ್ಞಾನಿಕ ನಾಮಕರಣವಾಗಿ ಅಂಗೀಕರಿಸಲ್ಪಟ್ಟಿದೆ.

ಡಾ. ವರದ ಗಿರಿ ಅವರು, ದಾಂಡೇಲಿ, ಶಿರಸಿ, ಭೀಮಗಡ ಸೇರಿದಂತೆ ಭಾರತದ ಅನೇಕ ಅಭಯಾರಣ್ಯಗಳಲ್ಲಿ ವರ್ಷಾನುಗಟ್ಟಲೆ ಅಲೆದಾಡಿ ಸಂಶೋಧನೆ ನಡೆಸುತ್ತಿದ್ದಾರೆ. ಉರಗ, ಸರೀಸೃಪಗಳ ಸಂಶೋಧನೆಯ ಅವರ ಪ್ರವೃತ್ತಿಯೇ ವೃತ್ತಿಯಾಗಿದ್ದು ವಿಶೇಷ. ಸಂಶೋಧನೆಗಾಗಿ ಕಾಡಿಗೆ ತೆರಳಿದರೆ ದಿನವಿಡೀ ಅಲೆದು ಒಂದು ಹಾವೂ ಸಿಗದೇ ಬರಿಗೈಲಿ ಬಂದ ಉದಾಹರಣೆಗಳೂ ಇವೆ.ಒಮ್ಮೆ ಪಶ್ಚಿಮ ಘಟ್ಟದಲ್ಲಿ ಹಾವುಗಳ ಸಂಶೋಧನೆಯಲ್ಲಿ ತೊಡಗಿದ್ದಾಗ ಎರಡು ಅಪರೂಪದ ಹಾವುಗಳು ಇವರ ಕಣ್ಣಿಗೆ ಗೋಚರಿಸಿದವು. ಅವುಗಳ ತಳಿ ಪರಿಚಯ ಗಿರಿಯವರಿಗೆ ಇರಲಿಲ್ಲ. ಜರ್ಮನಿಯ ಸಂಶೋಧಕರು ಭಾರತಕ್ಕೆ ಬಂದಾಗ ಈ ಎರಡೂ ಹಾವುಗಳನ್ನು ತೋರಿಸಿದ್ದಾರೆ. ಅವರು ಅವುಗಳನ್ನು ನೋಡಿ ಅಪರೂಪದ ಅನಾಮಧೇಯ ತಳಿ ಎಂದು ತಿಳಿಸಿದ್ದಲ್ಲದೆ, ಅದಕ್ಕೆ 'ಡೆಂಡರ್‌ಲ್ಯಾಪಿಸ್ ಗಿರಿ' ಎಂದು ನಾಮಕರಣ ಮಾಡಿದ್ದಾರೆ.

ಡಾ. ವರದ ಗಿರಿ ಅವರು ಅಂಕಲಿ ಗ್ರಾಮದಲ್ಲಿ ಹುಟ್ಟಿ ಪ್ರಾಥಮಿಕ ಶಿಕ್ಷ ಣವನ್ನು ಅಲ್ಲಿಯೇ ಮುಗಿಸಿದ್ದಾರೆ. ಮಹಾರಾಷ್ಟ್ರದ ಸಾಂಗಲಿಯಲ್ಲಿ ಪ್ರೌಢ ಶಿಕ್ಷ ಣ ಮತ್ತು ಶಿವಾಜಿ ಯುನಿವರ್ಸಿಟಿಯಲ್ಲಿ ಪ್ರಾಣಿಶಾಸ್ತ್ರ ಅಧ್ಯಯನ ಮಾಡಿದ್ದಾರೆ. ಹಾವುಗಳನ್ನು ಹಿಡಿಯುವ ವಿಷಯದಲ್ಲಿ ಅವರು ಯಾವುದೇ ತರಬೇತಿ ಪಡೆದಿಲ್ಲ. ಹೈಸ್ಕೂಲ್‌ನಲ್ಲಿ ಹಾವು ಹಿಡಿಯುತ್ತಿದ್ದ ಗೆಳೆಯನೊಬ್ಬನಿಂದ ಕುತೂಹಲ ಹುಟ್ಟಿದೆ. ಮುಂದೆ ಯೂನಿವರ್ಸಿಟಿ ಹಂತದಲ್ಲಿಯೂ ಇನ್ನೊಬ್ಬ ಗೆಳೆಯ ಹಾವು ಹಿಡಿಯುತ್ತಿದ್ದ. ಆಗ ಅವರ ಕುತೂಹಲ ಇಮ್ಮಡಿಗೊಂಡು ಉರಗಗಳ ಮಾಹಿತಿ ನೀಡುವ ಪುಸ್ತಕ ಓದಿ ಪ್ರಾವೀಣ್ಯತೆ ಸಾಧಿಸಿದರು.1999ರಲ್ಲಿ ಸಂಶೋಧನಾ ಕ್ಷೇತ್ರಕ್ಕಿಳಿದ ಡಾ. ವರದ ಗಿರಿ ಪ್ರಾರಂಭದಲ್ಲಿ 'ಬಾಂಬೆ ನ್ಯಾಚುರಲಿಸ್ಟ್ ಸೊಸೈಟಿ'ಯಲ್ಲಿ ರೀಸರ್ಚ್ ಅಸಿಸ್ಟೆಂಟ್ ಆಗಿ ಕೆಲಸ ಪ್ರಾರಂಭಿಸಿದರು. ಅಲ್ಲಿ 12 ವರ್ಷ ಉಪನಿರ್ದೇಶಕರಾಗಿ ಕೆಲಸ ಮಾಡಿದ್ದಾರೆ. ಬೆಂಗಳೂರಿನ ನ್ಯಾಷನಲ್ ಸೆಂಟರ್ ಫಾರ್ ಬಯಲಾಜಿಕಲ್ ಸೈನ್ಸ್ ರೀಸರ್ಚ್‌ನಲ್ಲಿ 3 ವರ್ಷ ಕೆಲಸ ಮಾಡಿದ್ದಾರೆ. ಲಂಡನ್, ಅಮೆರಿಕದಲ್ಲೂ ಸಂಶೋಧನೆ ಕೈಗೊಂಡಿದ್ದಾರೆ. 350 ಕಪ್ಪೆ, 200ರಷ್ಟು ಜಾತಿಯ ಹಲ್ಲಿಗಳ ಕುರಿತೂ ಸಂಶೋಧನೆ ನಡೆಸಿದ್ದಾರೆ.



ಡಾ. ವರದ ಗಿರಿ ಅವರು ಗ್ರಾಮೀಣ ಭಾಗದ ಯುವಕ. ಹಾವುಗಳ ಸಂಶೋಧನೆಗೆ ಮೊದಲು ಹೋದಾಗ ಅವರಿಗೆ ಗುರುಗಳೇ ಇರಲಿಲ್ಲ. ಈಗ ಅಂತಾರಾಷ್ಟ್ರೀಯ ಮಟ್ಟದಲ್ಲಿನ ಅವರ ಸಾಧನೆ ಹೆಮ್ಮೆ ತಂದಿದೆ.

# ತರಾತುರಿಯಲ್ಲಿ ಅಧಿವೇಶನ ಮುಗಿಸಲು ಹೊರಟಿದೆಯೇ ಕಾಂಗ್ರೆಸ್



**ಕಾಂಗ್ರೆಸ್ ಸರ್ಕಾರ ಅಧಿವೇಶನದ ಅವಧಿಯನ್ನು ಕಡಿತಗೊಳಿಸಿದ್ದರೂ, ವಕ್ಫ್ ಮಂಡಳಿಯಿಂದ ಭೂ ಕಬಳಿಕೆ ಸೇರಿದಂತೆ ಜನರ ಸಮಸ್ಯೆಗಳ ಪರವಾಗಿ ಹೋರಾಟ ಮಾಡಲಾಗುವುದು. ಕನ್ನಡ ಸಾಹಿತ್ಯ ಸಮ್ಮೇಳನ ಮುಗಿದ ನಂತರವೂ ಅಧಿವೇಶನವನ್ನು ಮುಂದುವರಿಸಿ ಎಂದು ಸಲಹೆ ನೀಡಿದ್ದೇನೆ ಎಂದು ವಿಧಾನಸಭೆಯಲ್ಲಿ ವಿಪಕ್ಷದ ನಾಯಕ ಆರ್.ಅಶೋಕ್ ಹೇಳಿದ್ದಾರೆ.**

ವಿಧಾನಮಂಡಲದ ಚಳಿಗಾಲದ ಅಧಿವೇಶನ ಇಂದು ( ಡಿ 9) ಆರಂಭಗೊಂಡಿದೆ. ಮೊದಲು, ಅಗಲಿದ ಗಣ್ಯರಿಗೆ ಸಂತಾಪ ಸೂಚಿಸಲಾಯಿತು. ಇದಾದ ನಂತರ, ನೂತನ ಶಾಸಕರು ಪ್ರಮಾಣವಚನ ಸ್ವೀಕರಿಸಿದರು. ಶಿಗ್ಗಾಂವಿ ನೂತನ ಶಾಸಕ ಯಾಸಿರ್ ಅಹ್ಮದ್ ಖಾನ್ ಪಠಾಣ್, ಕೈಯಲ್ಲಿ ಸಂವಿಧಾನದ ಪುಸ್ತಕವನ್ನು ಹಿಡಿದುಕೊಂಡು ಪ್ರಮಾಣ ಸ್ವೀಕರಿಸಿದರು.ಸದನದಲ್ಲಿ ಮಾತನಾಡಿದ ವಿಪಕ್ಷದ ನಾಯಕ ಆರ್.ಅಶೋಕ್, " ಕಾಂಗ್ರೆಸ್ ಸರ್ಕಾರ ಅಧಿವೇಶನದ ಅವಧಿಯನ್ನು ಕಡಿತಗೊಳಿಸಿದ್ದರೂ, ವಕ್ಫ್ ಮಂಡಳಿಯಿಂದ ಭೂ ಕಬಳಿಕೆ ಸೇರಿದಂತೆ ಜನರ ಸಮಸ್ಯೆಗಳ ಪರವಾಗಿ ಹೋರಾಟ ಮಾಡಲಾಗುವುದು " ಎಂದು ಹೇಳಿದರು.

**ಗೋವಿಂದರಾಜ್ ಬೂದಗುಂಪಾ :**

ಬೆಳಗಾವಿಯಲ್ಲಿ ಅಧಿವೇಶನದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅಶೋಕ್, ವಕ್ಫ್ ಮಂಡಳಿಯ ಭೂತ ಇಡೀ ರಾಜ್ಯವನ್ನು ಕಾಡುತ್ತಿದೆ. ರೈಲ್ವೆ ಜಮೀನು, ರಕ್ಷಣಾ ಜಮೀನು, ಅರಣ್ಯ ಜಾಗ, ರೈತರ ಜಮೀನುಗಳು ಹೀಗೆ ಕಂಡಿದ್ದೆಲ್ಲ ತನ್ನದು ಎಂದು ವಕ್ಫ್ ಮಂಡಳಿ ಹೇಳುತ್ತಿದೆ ಎಂದು ಆರೋಪಿಸಿದರು."ಈ ಕುರಿತು ಚರ್ಚಿಸಲು ಸ್ಪೀಕರ್ ಅವಕಾಶ ನೀಡಿದ್ದಾರೆ. ಈ ಸಮಸ್ಯೆಯನ್ನು ಬಿಜೆಪಿ ತಾರ್ಕಿಕ ಅಂತ್ಯಕ್ಕೆ ಒಯ್ಯಲಿದೆ. ಇದರ ನಡುವೆ ಬಾಣಂತಿಯರ ಸಾವು, ಉತ್ತರ ಕರ್ನಾಟಕದ ಸಮಸ್ಯೆಗಳ ಬಗ್ಗೆ ಚರ್ಚೆಯಾಗಬೇಕಿದೆ. ಆದರೆ ಸರ್ಕಾರ ಅಧಿವೇಶನದ ಅವಧಿಯನ್ನು ಒಂಬತ್ತು ದಿನಕ್ಕೆ ಇಳಿಸಿದೆ " ಎಂದು ಅಶೋಕ್ ದೂರಿದರು.



**ಕನ್ನಡ ಸಾಹಿತ್ಯ ಸಮ್ಮೇಳನ ಮುಗಿದ ನಂತರವೂ ಅಧಿವೇಶನವನ್ನು ಮುಂದುವರಿಸಿ ಎಂದು ಸಲಹೆ ನೀಡಿದ್ದೇನೆ. ಆದರೆ ಮಹಾತ್ಮ ಗಾಂಧೀಜಿಯವರ ಕಾರ್ಯಕ್ರಮ ಎಂದು ಸಬೂಬು ಹೇಳಿದ್ದಾರೆ. ಇನ್ನಷ್ಟು ದಿನಗಳ ಕಾಲ ಅಧಿವೇಶನ ನಡೆದಿದ್ದರೆ, ಅಬಕಾರಿ ಹಗರಣ, ರೇಷನ್ ಕಾರ್ಡ್ ರದ್ದು, ಡ್ರಗ್ ಮಾಫಿಯಾ ಮೊದಲಾದ ವಿಷಯಗಳ ಕುರಿತು ಚರ್ಚಿಸಬಹುದಿತ್ತು ಎಂದು ಅಶೋಕ್ ಅಭಿಪ್ರಾಯ ಪಟ್ಟಿದ್ದಾರೆ.ಕಾಂಗ್ರೆಸ್‌ಗೆ ತಮ್ಮ ಹಗರಣದ ಬಗ್ಗೆ ಚರ್ಚಿಸಲು ಇಷ್ಟವಿಲ್ಲ. ಆದಷ್ಟು ಬೇಗ ಅಧಿವೇಶನ ಮುಗಿಸಬೇಕೆಂಬ ತರಾತುರಿ ಕಾಂಗ್ರೆಸ್‌ಗಿದೆ. ಆದರೂ ಜನರ ಸಮಸ್ಯೆಗಳ ಪರವಾಗಿ ಬಿಜೆಪಿ ಹೋರಾಟ ಮಾಡಲಿದೆ. ಪ್ರತಿಪಕ್ಷವಾಗಿ ನಮ್ಮ ಕೆಲಸಗಳನ್ನು ನಾವು ಮಾಡಲಿದ್ದೇವೆ ಎಂದು ಅಶೋಕ್ ತಿಳಿಸಿದರು.ಪಂಚಮಸಾಲಿ ಸಮುದಾಯದವರು ಮೀಸಲಾತಿಗಾಗಿ ಹೋರಾಟ ಮಾಡುತ್ತಿದ್ದಾರೆ. ಅದನ್ನು ಸರ್ಕಾರ ತಡೆದು ಪ್ರಜಾಪ್ರಭುತ್ವವನ್ನು ದಮನ ಮಾಡಿದೆ, ಇದನ್ನು ಖಂಡಿಸಿ ಬಿಜೆಪಿ ಧರಣಿ ಮಾಡಿದೆ. ಈ ಹೋರಾಟ ನ್ಯಾಯಯುತ ಹಾಗೂ ಶಾಂತಿಯುತವಾಗಿದೆ. ಸದನದಲ್ಲಿ ಗೃಹ ಸಚಿವರು ಉತ್ತರ ನೀಡುವವರೆಗೆ ಹೋರಾಟ ನಡೆಯಲಿದೆ ಎಂದು ಆರ್.ಅಶೋಕ್ ಹೇಳಿದರು.ಉತ್ತರ ಕರ್ನಾಟಕ ಅಭಿವೃದ್ಧಿಗೆ ಹಿಂದೆ ಹೇಳಿದ್ದೇನು? ಈಗ ಮಾಡುತ್ತಿರುವುದೇನು? ಉತ್ತರ ಕರ್ನಾಟಕವನ್ನು ಚಿನ್ನದ ನಾಡು ಮಾಡುತ್ತೇವೆ ಎಂದು ಹೇಳಿದ್ದವರು ಎಲ್ಲಿ ಹೋದರು? ಎಂದು ಪ್ರಶ್ನೆ ಮಾಡಿದ ಆರ್.ಅಶೋಕ್, ಕರ್ನಾಟಕದ ಇತಿಹಾಸದಲ್ಲೇ ಈ ಸರ್ಕಾರ ಅತ್ಯಂತ ಕಳಪೆ ಎಂದು ಕಿಡಿಕಾರಿದರು.**

# ಸರಕಾರಿ ನೌಕರರಿಗೆ ಕೆಲಸಕ್ಕೆ ಅಡಚಣೆ , ಹಲ್ಲೆ ಕಾನೂನು ಏನು ಹೇಳುತ್ತದೆ ಗೊತ್ತಾ!?

ಕರ್ನಾಟಕದಲ್ಲಿ ಕರ್ತವ್ಯ ನಿರತ ಸರ್ಕಾರಿ ನೌಕರನ ಮೇಲೆ ಹಲ್ಲೆ ಮಾಡುವುದು ಗಂಭೀರ ಅಪರಾಧ. ಕರ್ನಾಟಕ ಸರ್ಕಾರಿ ನೌಕರರನ್ನು ಆಕ್ರಮಣದಿಂದ ರಕ್ಷಿಸುವ ಕೆಲವು ಕಾನೂನುಗಳು ಮತ್ತು ನಿಯಮಗಳು ಇಲ್ಲಿವೆ:



ವಿಜಯ ಅಮೃತರಾಜ್
ವಕೀಲರು ಕೊಪ್ಪಳ
99458 73626.



## ಕಾನೂನುಗಳು ಮತ್ತು ನಿಯಮಗಳು.

1. ಸರ್ಕಾರಿ ನೌಕರರ ಬೆದರಿಕೆ ತಡೆ ಕಾಯ್ದೆ, 1951, ಈ ಕಾಯಿದೆಯು ಕರ್ತವ್ಯದಲ್ಲಿರುವ ಸರ್ಕಾರಿ ನೌಕರನನ್ನು ಬೆದರಿಸುವುದು ಅಥವಾ ಹಲ್ಲೆ ಮಾಡುವುದು ಅಪರಾಧವಾಗಿದೆ.
2. BNS ನ ಸೆಕ್ಷನ್ 131 ಈ ವಿಭಾಗವು ಕರ್ತವ್ಯದಲ್ಲಿರುವ ಸಾರ್ವಜನಿಕ ಸೇವಕನ ವಿರುದ್ಧ ಆಕ್ರಮಣ ಅಥವಾ ಕ್ರಿಮಿನಲ್ ಬಲವನ್ನು ಬಳಸುವುದನ್ನು ಅಪರಾಧ ಮಾಡುತ್ತದೆ.
3. BNS ನ ಸೆಕ್ಷನ್ 132 ಈ ವಿಭಾಗವು ಕರ್ತವ್ಯದಲ್ಲಿರುವ ಸಾರ್ವಜನಿಕ ಸೇವಕನಿಗೆ ಸ್ವಯಂಪ್ರೇರಣೆಯಿಂದ ಹಾನಿಯನ್ನುಂಟುಮಾಡುವುದನ್ನು ಅಪರಾಧ ಮಾಡುತ್ತದೆ.
4. ಕರ್ನಾಟಕ ಸರ್ಕಾರಿ ನೌಕರರ ನಡವಳಿಕೆ ನಿಯಮಗಳು, 1966, ಈ ನಿಯಮಗಳು ಸರ್ಕಾರಿ ನೌಕರರು ಶಾಂತಿ ಭಂಗ ಅಥವಾ ಸಹೋದ್ಯೋಗಿಗಳು ಅಥವಾ ಸಾರ್ವಜನಿಕರ ಮೇಲೆ ಹಲ್ಲೆಗೆ ಕಾರಣವಾಗುವ ಯಾವುದೇ ನಡವಳಿಕೆಯಲ್ಲಿ ತೊಡಗುವುದನ್ನು ನಿಷೇಧಿಸುತ್ತವೆ.

## ದಂಡಗಳು ಮತ್ತು ಶಿಕ್ಷೆ

1. ಜೈಲು; ಕರ್ತವ್ಯದಲ್ಲಿರುವ ಸರ್ಕಾರಿ ನೌಕರನ ಮೇಲೆ ಹಲ್ಲೆ ನಡೆಸುವುದು ಅಪರಾಧದ ತೀವ್ರತೆಗೆ ಅನುಗುಣವಾಗಿ 2 ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ಅವಧಿಯ ಜೈಲು ಶಿಕ್ಷೆಗೆ ಗುರಿಯಾಗಬಹುದು.
2.ದಂಡ ; ಅಪರಾಧಿಯು ದಂಡವನ್ನು ಪಾವತಿಸಲು ಹೊಣೆಗಾರನಾಗಬಹುದು, ಇದು ಕೆಲವು ಸಾವಿರದಿಂದ ಹಲವಾರು ಲಕ್ಷ ರೂಪಾಯಿಗಳವರೆಗೆ ಇರುತ್ತದೆ.
3. ಶಿಸ್ತಿನ ಕ್ರಮ; ಅಪರಾಧಿ ಸರ್ಕಾರಿ ನೌಕರನಾಗಿದ್ದರೆ, ಅವರು ಅಮಾನತು ಅಥವಾ ಸೇವೆಯ ವಜಾ ಸೇರಿದಂತೆ ಶಿಸ್ತು ಕ್ರಮವನ್ನು ಎದುರಿಸಬಹುದು.

## ಸರ್ಕಾರಿ ನೌಕರರಿಗೆ ರಕ್ಷಣೆ

1. ಸುರಕ್ಷತಾ ಕ್ರಮಗಳು; ಸರ್ಕಾರಿ ಕಚೇರಿಗಳಲ್ಲಿ ಭದ್ರತಾ ಸಿಬ್ಬಂದಿ ಮತ್ತು ಸಿಸಿಟಿವಿ ಕ್ಯಾಮೆರಾಗಳನ್ನು ಒದಗಿಸುವುದು ಸೇರಿದಂತೆ ಸರ್ಕಾರಿ ನೌಕರರನ್ನು ಹಲ್ಲೆಯಿಂದ ರಕ್ಷಿಸಲು ಕರ್ನಾಟಕ ಸರ್ಕಾರವು ವಿವಿಧ ಭದ್ರತಾ ಕ್ರಮಗಳನ್ನು ಜಾರಿಗೆ ತಂದಿದೆ.
2. ಕಾನೂನು ಬೆಂಬಲ; ಹಲ್ಲೆ ಅಥವಾ ಬೆದರಿಕೆಗೆ ಬಲಿಯಾದ ಸರ್ಕಾರಿ ನೌಕರರಿಗೆ ಸರ್ಕಾರ ಕಾನೂನು ಬೆಂಬಲವನ್ನು ನೀಡುತ್ತದೆ.
3. ಸಮಾಲೋಚನೆ ಮತ್ತು ಬೆಂಬಲ; ಹಲ್ಲೆ ಅಥವಾ ಬೆದರಿಕೆಗೆ ಬಲಿಯಾದ ಸರ್ಕಾರಿ ನೌಕರರಿಗೆ ಸರ್ಕಾರವು ಸಲಹೆ ಮತ್ತು ಬೆಂಬಲವನ್ನು ನೀಡುತ್ತದೆ.

# ವಿವಾಹ ವಿಚ್ಛೇದನ ಎಂಬುದು ಸಂಭ್ರಮಿಸುವ ವಿಚಾರ ಅಲ್ಲ

ವಿಚ್ಛೇದನದ ಬಗ್ಗೆ ವದಂತಿ ಹಬ್ಬಿಸಿ ಸಂಭ್ರಮಿಸುವ ಮನಸ್ಥಿತಿಯೂ ಬೇಡ, ಮನಸ್ಸು ಮುರಿದವನು ರಾಕ್ಷಸನಾದರೆ ಜೋಡಿಗಳನ್ನು ಒಂದು ಮಾಡಿದವನು ದೇವರಂತಾಗಬಲ್ಲ, ವಿಚ್ಛೇದನ ಮಾತ್ರವೇ ಸುಖಸಂಸಾರಕ್ಕೆ ಪರಿಹಾರ ಖಂಡಿತಾ ಅಲ್ಲ, ಹಿರಿಯರು ಈ ಸಮಾಜದಲ್ಲಿ ಬಾಳಿಬದುಕಿದ್ದಾರೆ, ಜೀವನವನ್ನು ಅನುಭವಿಸಿದ್ದಾರೆ, ಅಂತಹ ಹಿರಿಯರ ಮಾರ್ಗದರ್ಶನ, ಹಿತೋಪದೇಶವನ್ನು ಪಾಲಿಸಿದರೆ ಪರಸ್ಪರರ ನಡುವಿನ ಅಭಿಪ್ರಾಯ ಬೇಧ ನಿವಾರಣೆಯಾಗಿ ವಿಚ್ಛೇದನ ಎಂಬ ಭೂತ ಮನದಿಂದ ಓಡಿಹೋಗಬಹುದು,
ಜೋಡಿಗಳ ಸಂಭ್ರಮದಲ್ಲಿ ಮಕ್ಕಳಾಟದ ಮನಸ್ಥಿತಿಯಿರಲಿ, ವಿಚ್ಛೇದನಕ್ಕೆ ಮಕ್ಕಳಾಟದಂಥ ತರಾತುರಿಯ ನಿರ್ಧಾರ ಬೇಡ, ಕೊಂಚ ಯೋಚಿಸಿ!




## ವಿಚ್ಛೇದನಕ್ಕೆ ಮುನ್ನ ಸಲಹೆಯ ಕೌನ್ಸಿಲಿಂಗ್ ಪಡೆಯಿರಿ

ಹಿಂದಿನ ಕಾಲದಲ್ಲಿ ಅವಿಭಕ್ತ ಕುಟುಂಬ ವ್ಯವಸ್ಥೆಯಲ್ಲಿ ಕಿರಿಯ ದಂಪತಿಗೆ ಹಿರಿಯರ ಮಾರ್ಗದರ್ಶನ ಇರುತ್ತಿತ್ತು, ಸಮಸ್ಯೆ ಬಂದಾಗ ನಾಲ್ಕು ಗೋಡೆಗಳ ನಡುವೇ ಪರಿಹಾರವಾಗುತ್ತಿತ್ತೇ ವಿನಾ ಕೋರ್ಟ್ ಮೆಟ್ಟಿಲೇರುತ್ತಿರಲಿಲ್ಲ, ಈಗ ಹಾಗಿಲ್ಲ, ಹಿರಿಯರು ಮತ್ತು ಕಿರಿಯರ ನಡುವೇ ವಯಸ್ಸು ಮತ್ತು ಮನಸ್ಸಿನ ಅಂತರ ಹೆಚ್ಚಾಗಿದೆ, ಹೀಗಾಗಿ ಹಿರಿಯರ ಮಾತಿಗೆ ಗೌರವವೂ ಇಲ್ಲ, ಕಿರಿಯರಿಗೆ ಉಪದೇಶ ಬೇಕಾಗಿಯೂ ಇಲ್ಲ ಎಂಬಂತಾಗಿದೆ, ವಿಚ್ಛೇದನ ಬಯಸಿ ಕೋರ್ಟ್‌ಗೆ ಬರುತ್ತಿರುವ ಹಲವಾರು ಪ್ರಕರಣಗಳಲ್ಲಿ ನಾನು ಕಂಡದ್ದೇನೆಂದರೆ, ದಂಪತಿಗೆ ತಾಳ್ಮೆ ಇರುವುದಿಲ್ಲ, ಮೊದಲೆಲ್ಲಾ ಪರಿಹಾರ ಏನು ಎಂದು ವಕೀಲರ ಬಳಿ ಸಲಹೆ ಕೇಳುತ್ತಿದ್ದರು, ಈಗ ವಿಚ್ಛೇದನ ಬೇಕೇ ಬೇಕೆಂದು ಇಬ್ಬರೂ ನಿರ್ಧಾರ ಮಾಡಿಕೊಂಡೇ ಬರುತ್ತಿದ್ದಾರೆ, ಸಾಧ್ಯವೇ ಇಲ್ಲ, ಇನ್ನಂತೂ ಒಟ್ಟಿಗೆ ಜೀವಿಸಲು ಸಾಧ್ಯವೇ ಇಲ್ಲ ಎಂದು ಕೆಲವೇ ಕ್ಷಣಗಳಲ್ಲಿ ಇಬ್ಬರೂ ನಿರ್ಧರಿಸಿಬಿಟ್ಟಿರುತ್ತಾರೆ, ಇಂಥ ಆತುರದ ನಿರ್ಧಾರಗಳಿಂದಾಗಿಯೇ ವಿಚ್ಛೇದನ ಪ್ರಕರಣ ಹೆಚ್ಚಾಗುತ್ತಲೇ ಇದೆ,

ಈ ಹಿಂದಿನ ದಿನಗಳಲ್ಲಿ ಪತಿಯಿಂದ ಹಲ್ಲೆ ಎಂದು ಆರೋಪಿಸಿ ಪತ್ನಿ ವಿಚ್ಛೇದನ ಕೇಳುತ್ತಿದ್ದಳು, ಅಥವಾ ಪತ್ನಿಯ ನಡವಳಿಕೆ ಸರಿಯಿಲ್ಲ, ಮಾನಸಿಕ ಹಿಂಸೆ ತಡೆಯಲಾಗುತ್ತಿಲ್ಲ ಎಂಬೆಲ್ಲಾ ಕಾರಣಗಳಿಂದ ಪತಿ ವಿಚ್ಛೇದನಕ್ಕೆ ಅರ್ಜಿ ಸಲ್ಲಿಸುತ್ತಿದ್ದ, ಈಗ, ಇವುಗಳ ಬದಲಿಗೆ, ಪರಸ್ಪರ ಹೊಂದಾಣಿಕೆಯ ಕೊರತೆಯಿಂದಲೇ ದಂಪತಿ ವಿಚ್ಛೇದನಕ್ಕೆ ಅರ್ಜಿ ಸಲ್ಲಿಸುತ್ತಿರುವುದು ಸ್ಪಷ್ಟವಾಗುತ್ತಿದೆ, ಬಹುತೇಕ ಪ್ರಕರಣಗಳು ಬಹಳ ಸಿಲ್ಲಿಯಾಗಿರುತ್ತದೆ, ಮೇಲ್ನೋಟಕ್ಕೇ ಇದೆಲ್ಲಾ ಒಂದು ವಿಷಯವೇ ಎಂದು ಅನ್ನಿಸುತ್ತದೆ, ಆದರೆ ದಂಪತಿ ಪಾಲಿಗೆ ಹೊಂದಾಣಿಕೆಯ ಬಾಳಿಗಿಂತ ವಿಚ್ಛೇದನದ ಮೂಲಕ ಸ್ವಾತಂತ್ರ್ಯದ ಜೀವನವೇ ಮುಖ್ಯ ಎನಿಸುವಂತಾಗಿರುವುದು ದುರದೃಷ್ಯಕರ,

ಕೋರ್ಟ್‌ನಲ್ಲಿಯೂ ಅಷ್ಟೇ, ವಿವಾಹ ವಿಚ್ಛೇದನ ಕೂಡಲೇ ನೀಡಲಾಗುವುದಿಲ್ಲ, ಕೆಲವೊಂದು ವಿಶೇಷ ಪ್ರಕರಣಗಳನ್ನು ಹೊರತುಪಡಿಸಿದಂತೆ ವಿಚ್ಛೇದನಕ್ಕೆ ಕನಿಷ್ಟ 1 ವರ್ಷ ಬೇಕೇ ಬೇಕು, ಆದರೆ ದಂಪತಿ ಕೋರ್ಟ್ ಆದೇಶಕ್ಕೂ ಕಾಯದೇ ಡಿವೋರ್ಸ್ ಆಗಿದೆ ಎಂದು ಬಹಿರಂಗವಾಗಿ ಹೇಳಿಕೊಂಡು ಪರಸ್ಪರ ದೂರವಾಗಿಬಿಡುತ್ತಿದ್ದಾರೆ, ತಾಳ್ಮೆಯಿಂದ ಕಾಯುತ್ತಿದ್ದರೆ ಅನೇಕ ಪ್ರಕರಣಗಳಲ್ಲಿ ಮತ್ತೆ ದಂಪತಿ ಒಂದಾಗುವ ಸಾಧ್ಯತೆ ಹೆಚ್ಚಾಗಿರುತ್ತಿತ್ತು,

ಬೇಸರ ಏನೆಂದರೆ, ಮಗು ಜನಿಸಿದ ಬಳಿಕವೂ ಕೆಲವರು ವಿಚ್ಛೇದನಕ್ಕೆ ಮುಂದಾಗಿ ಮಗುವಿಗೆ ಸೂಕ್ತ ಪಾಲಕರಿಲ್ಲದಂತೆ ಮಾಡಿ ಮಗುವಿನ ಭವಿಷ್ಯದಲ್ಲಿ ಚೆಲ್ಲಾಟವಾಡುವಂತಾಗಿದೆ, ಇಂಥ ಪ್ರಕರಣ ಕೂಡ ಹೆಚ್ಚಾಗುತ್ತಿರುವುದು ಕಳವಳಕಾರಿ,

ಕೊಡಗಿನಲ್ಲಿ ಕೌಟುಂಬಿಕ ಕಲಹಗಳ ವಿಲೇವಾರಿ ಸಂಬಂಧಿತ 1 ಕೋರ್ಟ್ ಇದ್ದರೆ ಮೈಸೂರಿನಲ್ಲಿ 4 ಮತ್ತು ಬೆಂಗಳೂರಿನಲ್ಲಿ 8 ಕೋರ್ಟ್‌ಗಳಿದೆ, ಇಂಥ ಕೋರ್ಟ್‌ಗಳ ಸಂಖ್ಯೆ ಕೂಡ ಹೆಚ್ಚಾಗುತ್ತಿರುವುದು ವಿಚ್ಛೇದನ, ಕೌಟುಂಬಿಕ ಸಮಸ್ಯೆ ಏರಿಕೆಯಾಗುತ್ತಿರುವುದಕ್ಕೆ ಕಾರಣ, ಇದೆಲ್ಲಾ ನಾಗರಿಕ ಸಮಾಜದಲ್ಲಿ ಉತ್ತಮ ಬೆಳವಣಿಗೆಯಲ್ಲ,



### ವಿಚ್ಛೇದನ ಪಡೆದವರ ಪೋಷಕರ ಕಣ್ಣೀರಿಗೆ ಯಾರು ಹೊಣೆ?


**ಲಕ್ಷಗಟ್ಟಲೆ ವೆಚ್ಚ ಮಾಡಿ 2-3 ದಿನಗಳ ವಿವಾಹ ಸಮಾರಂಭ ಮಾಡಿರುವ ಪೋಷಕರು ತಮ್ಮ ಮಕ್ಕಳು ವಿಚ್ಛೇದನ ಪಡೆದುಕೊಂಡ ಬಳಿಕ ನೊಂದುಕೊಳ್ಳುತ್ತಾರೆ, ವಿಚ್ಛೇದನಕ್ಕೆ ಮೂಲಕಾರಣ ಏನೇ ಇರಬಹುದು, ಆದರೆ, ಲಕ್ಷಗಟ್ಟಲೆ ನಷ್ಟಕ್ಕೆ, ಸಾಮಾಜಿಕವಾಗಿ ಉಂಟಾಗುವ ಮುಜುಗರಕ್ಕೆ ಯಾರು ಹೊಣೆಗಾರರು? ಇದನ್ನೆಲ್ಲಾ ವಿಚ್ಛೇದನ ಬಯಸುವ ಯುವಪೀಳಿಗೆ ಯೋಚಿಸಲೇಬೇಕಾಗಿದೆ,**

**ಹೀಗಾಗಿ, ನನ್ನ ಸಲಹೆ ಏನೆಂದರೆ, ವಿಚ್ಛೇದನಕ್ಕೆ ಮುನ್ನ ಯಾರೇ ಆಗಿರಲಿ, ಸಾಕಷ್ಟು ತಾಳ್ಮೆಯಿಂದ ಯೋಚಿಸಿ, ನಿಮ್ಮ ಜೀವನದ ಜತೆಗೇ ಪೋಷಕರು, ಬಂಧುಗಳ ನಿರ್ಧಾರವನ್ನೂ ಗೌರವಿಸಿ, ವೃತ್ತಿಪರ ಕೌನ್ಸಿಲರ್ ಗಳು ಈಗ ಸಾಕಷ್ಟು ಸಂಖ್ಯೆಯಲ್ಲಿದ್ದಾರೆ, ಅವರ ಮಾರ್ಗದರ್ಶನವನ್ನೂ ಪಡೆಯಿರಿ, ಬಹುತೇಕ ಸಂದರ್ಭಗಳಲ್ಲಿ ವೈಮನಸ್ಸಿನ ಪ್ರಾರಂಭಿಕ ದಿನಗಳಲ್ಲಿಯೇ ಪರಿಹಾರ ಕೂಡ ಸಾಧ್ಯ, ಆಮೇಲೂ ಒಟ್ಟಿಗೆ ಜೀವಿಸುವುದು ಅಸಾಧ್ಯ ಎಂದಾದಲ್ಲಿ ಮಾತ್ರ ವಿಚ್ಛೇದನಕ್ಕೆ ಸಾಕಷ್ಟು ತಾಳ್ಮೆಯಿಂದಲೇ ಅರ್ಜಿ ಸಲ್ಲಿಸಿ, 1 ವರ್ಷದ ಕಾಲಾವಧಿಯಲ್ಲಿಯೂ ಮತ್ತೆ ಒಟ್ಟಿಗೆ ಜೀವಿಸುತ್ತೇವೆ ಎಂಬ ನಂಬಿಕೆ ಬಂದದ್ದೇ ಆದಲ್ಲಿ ಅದಕ್ಕೂ ನ್ಯಾಯಾಲಯ ನಿಮಗೆ ಸಹಾಯ ಮಾಡಲಿದೆ, ಕಾನೂನಿಗೆ ಕೌಟುಂಬಿಕ ಸಹಬಾಳ್ವೆ ಮುಖ್ಯವೇ ಹೊರತು, ಕುಟುಂಬದಲ್ಲಿ ಒಡಕು ಖಂಡಿತಾ ಅಲ್ಲ ಎಂಬುದನ್ನು ದಂಪತಿ ನೆನಪಿಟ್ಟುಕೊಳ್ಳಿ,**

# ಚಿಕಿತ್ಸೆಗು ಮುನ್ನ ತಿಮ್ಮಪ್ಪನಿಗೆ ಮುಡಿ ಕೊಟ್ಟ ಶಿವರಾಜ್ ಕುಮಾರ್ ಮತ್ತು ದಂಪತಿ



ನಟ ಶಿವರಾಜ್‌ಕುಮಾರ್ ಹಾಗೂ ಅವರ ಕುಟುಂಬಸ್ಥರು ತಿರುಪತಿ ತಿಮ್ಮಪ್ಪನ ದರ್ಶನ ಪಡೆದಿದ್ದಾರೆ. ಅಲ್ಲದೇ ಶಿವಣ್ಣ ಹಾಗೂ ಅವರ ಪತ್ನಿ ಗೀತಾ ಶಿವರಾಜ್ ಕುಮಾರ್ ತಿಮ್ಮಪ್ಪನಿಗೆ ಮುಡಿಕೊಟ್ಟಿದ್ದಾರೆ. ಪತ್ನಿ ಗೀತಾ, ಮಗಳು ನಿವೇದಿತಾ ಮತ್ತು ಆಪ್ತರ ಜೊತೆ ತಿಮ್ಮಪ್ಪನ ದರ್ಶನ ಪಡೆದಿರುವ ಶಿವರಾಜ್ ಕುಮಾರ್ ಮುಡಿ ಕೊಟ್ಟಿದ್ದಾರೆ. ವಿದೇಶಕ್ಕೆ ಹಾರುವ ಮುನ್ನ ದೇವರ ದರ್ಶನ ಪಡೆದಿದ್ದಾರೆ. ಶಿವಣ್ಣ ಸೇರಿದಂತೆ ಗೀತಾ ಶಿವರಾಜ್ ಕುಮಾರ್ ಹಾಗು ಕುಟುಂಬಸ್ಥರಿಂದ ಮುಡಿ ಸೇವೆ ನಡೆದಿದೆ. ಇದೇ ತಿಂಗಳ 18 ಕ್ಕೆ ಅನಾರೋಗ್ಯದ ಕಾರಣ ಹೆಚ್ಚಿನ ಚಿಕಿತ್ಸೆಗೆ ನಟ ಶಿವಣ್ಣ ಅಮೇರಿಕಾಗೆ ಹೋಗಲಿದ್ದಾರೆ. ಅಮೇರಿಕಾಗೆ ಚಿಕಿತ್ಸೆಗೆ ಹೋಗೊ ಮುನ್ನ ತಿಮ್ಮಪ್ಪನ ಹರಕೆ ತೀರಿಸಿದ ಶಿವಣ್ಣ ದಂಪತಿ ತಿರುಪತಿ ತಿಮ್ಮಪ್ಪನಿಗೆ ಮುಡಿ ನೀಡಿದ್ದಾರೆ. ಅವರ ತಿರುಪತಿ ಭೇಟಿಯ ಫೋಟೋಗಳು ಸದ್ಯ ವೈರಲ್ ಆಗಿವೆ. ಆ ಫೋಟೋಗಳು ಇಲ್ಲಿವೆ ನೋಡಿ.





## Pushpa 2 ಬಾಕ್ಸ್ ಆಫೀಸ್ ಅಬ್ಬರ; 829 ಕೋಟಿ ಗಳಿಕೆ, ಮೊದಲ ವಾರದ ದಾಖಲೆ ಛಿದ್ರ!




ಬಾಕ್ಸ್ ಆಫೀಸ್ ಗಳಿಕೆಯಲ್ಲಿ ಪುಷ್ಪ 2 ಚಿತ್ರದ ಓಟ ಮುಂದುವರೆದಿದ್ದು, ಬಿಡುಗಡೆಯಾದ 4 ದಿನಕ್ಕೆ ಚಿತ್ರದ ಗಳಿಕೆ 829 ಕೋಟಿ ರೂಗೆ ಏರಿಕೆಯಾಗಿದೆ.

ಆ ಮೂಲಕ ಬಿಡುಗಡೆಯಾದ ಮೊದಲ ವಾರಾಂತ್ಯದ ಹೊತ್ತಿಗೆ ಅತೀ ಹೆಚ್ಚು ಗಳಿಕೆ ಕಂಡ ಭಾರತದ ಮೊದಲ ಚಿತ್ರ ಎಂಬ ಕೀರ್ತಿಗೆ ಪುಷ್ಪ 2 ಪಾತ್ರವಾಗಿದೆ. ಮೂಲಗಳ ಪ್ರಕಾರ ಪುಷ್ಪ 2 ಚಿತ್ರ ವಿಶ್ವಾದ್ಯಂತ 92.5 ಮಿಲಿಯನ್ ಡಾಲರ್ ಗಳಿಸಿದ್ದು, ಅಂತೆಯೇ ಅತೀ ಹೆಚ್ಚು ಗಳಿಕೆ ಕಂಡ ಭಾರತೀಯ ಚಿತ್ರಗಳ ಸಾಲಿಗೆ ಸೇರಿದೆ. ಈ ದಾಖಲೆ ಮಾಡಿದ ಭಾರತದ 9ನೇ ಚಿತ್ರ ಎಂಬ ಕೀರ್ತಿಗೆ ಭಾಜನವಾಗಿದೆ.ಬ್ರಿಟನ್ ನಲ್ಲಿ 1,118,264, ಪೌಂಡ್ ಗಳಿಸಿದ್ದು, UAEಯಲ್ಲಿ 37,00,000 ಡಾಲರ್, ಆಸ್ಟ್ರೇಲಿಯಾದಲ್ಲಿ 2,316,337 ಡಾಲರ್, ನ್ಯೂಜಿಲೆಂಡ್ ಮತ್ತು ಫಿಜಿಯಲ್ಲಿ 411,580 ಡಾಲರ್, ಸಿಂಗಾಪುರದಲ್ಲಿ 384,000 ಡಾಲರ್, ಮಲೇಷ್ಯಾದಲ್ಲಿ 1,542,000 ಡಾಲರ್ ಗಳಿಸಿದೆ. ಅಂತೆಯೇ ಜರ್ಮನಿಯಲ್ಲಿ ಪುಷ್ಪ2 ಚಿತ್ರ 200,470 ಯೂರೋ ಗಳಿಸಿದ್ದು, ಇತರೆ ದೇಶಗಳಲ್ಲಿ ಒಟ್ಟಾರೆ 750,000 ಡಾಲರ್ ಗಳಿಕೆ ಕಂಡಿದೆ ಎಂದು ಚಿತ್ರತಂಡ ಮಾಹಿತಿ ನೀಡಿದೆ.

## ಕಡಿಮೆ ಅವಧಿಯಲ್ಲಿ 500 ಕೋಟಿ ರೂ ಗಳಿಸಿದ ಮೊದಲ ಚಿತ್ರ

ಇದೇ ವೇಳೆ ಪುಷ್ಪ 2 ಚಿತ್ರದ ಬಾಕ್ಸ್ ಆಫೀಸ್ ಗಳಿಕೆ 3 ದಿನಕ್ಕೆ 600 ಕೋಟಿ ರೂ ದಾಟಿತ್ತು. ಈ ಮೂಲಕ ಅತ್ಯಂತ ಕಡಿಮೆ ಅವಧಿಯಲ್ಲಿ 500 ಕೋಟಿ ರೂ ಗಳಿಕೆ ಕಂಡ ಸಿನಿಮಾ ಎಂಬ ದಾಖಲೆಗೆ ಪಾತ್ರವಾಗಿತ್ತು. ಇದಲ್ಲದೆ ಭಾರತೀಯ ಚಿತ್ರರಂಗದ ಇತಿಹಾಸದಲ್ಲಿ ಅತಿ ಹೆಚ್ಚು ಓಪನಿಂಗ್ ಗಳಿಸಿದ ಚಿತ್ರಗಳ ದಾಖಲೆಯನ್ನು ಪುಷ್ಪ2 ಮುರಿದಿದ್ದು, ಇದಕ್ಕೂ ಮೊದಲು SS ರಾಜಮೌಳಿಯವರ RRR (Rs 223.5 ಕೋಟಿ), ಬಾಹುಬಲಿ 2 (Rs 217 ಕೋಟಿ) ಮತ್ತು ಕಲ್ಕಿ 2898 AD (Rs 175 ಕೋಟಿ) ಗೆ ಸೇರಿತ್ತು.



# ಕಾಂಗ್ರೆಸ್ ದುರಾಡಳಿತವನ್ನು ಬಿಜೆಪಿ ಬಯಲು ಬಯಲು ಮಾಡಲಿದೆ

ಕಾಂಗ್ರೆಸ್ ಪಕ್ಷದ ದುರಾಡಳಿತ, ಭ್ರಷ್ಟಾಚಾರವನ್ನು ಬಿಜೆಪಿ ಬಯಲಿಗೆಳೆಯಿದೆ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಅವರು ಸೋಮವಾರ ಹೇಳಿದರು.

ಬೆಳಗಾವಿಯಲ್ಲಿ ಬಿಜೆಪಿ ಶಾಸಕಾಂಗ ಪಕ್ಷದ ಸಭೆಯಲ್ಲಿ ಸೋಮವಾರ ನಡೆದಿದ್ದು, ಸಭೆಯಲ್ಲಿ ಚಳಿಗಾಲದ ಅಧಿವೇಶನದಲ್ಲಿ ರಾಜ್ಯ ಸರ್ಕಾರದ ಭ್ರಷ್ಟಾಚಾರ ಮತ್ತು ರೈತ ವಿರೋಧಿ ಆಡಳಿತದ ವಿರುದ್ಧ ಹೋರಾಟ ನಡೆಸುವ ಕುರಿತು ಚರ್ಚೆ ನಡೆದಿದೆ.

ಸಭೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅಶೋಕ್ ಅವರು, ರಾಜ್ಯವನ್ನು ಕಾಡುತ್ತಿರುವ ಹಲವಾರು ಸಮಸ್ಯೆಗಳ ಕುರಿತು ಉತ್ತರದಾಯಿತ್ವಕ್ಕೆ ಒತ್ತಾಯಿಸಿ ಪ್ರತಿಪಕ್ಷಗಳು ಕಾಂಗ್ರೆಸ್ ವಿರುದ್ಧ ಹೋರಾಟ ನಡೆಸಲಿಗ ಎಂದು ಹೇಳಿದರು.

ಸರಕಾರದ ನಿರ್ಲಕ್ಷ್ಯದಿಂದ ಕರ್ನಾಟಕದ ಜನತೆ ಸಂಕಷ್ಟಕ್ಕೆ ಸಿಲುಕಿದ್ದಾರೆ. ರಸ್ತೆಗಳು ಹಾಳಾಗಿವೆ, ಆಸ್ಪತ್ರೆಗಳು ತೀವ್ರ ಔಷಧದ ಕೊರತೆಯನ್ನು ಎದುರಿಸುತ್ತಿವೆ. ಕುಡಿಯುವ ನೀರಿನ ಸಮಸ್ಯೆ ಎದುರಾಗಿದೆ. ಭಾರೀ ಮಳೆಯ ನಂತರವೂ ಈ ಸಮಸ್ಯೆಗಳನ್ನು ನಿರ್ಲಕ್ಷಿಸಲಾಗಿದೆ. ಅಧಿವೇಶನದಲ್ಲಿ ಈ ಬಗ್ಗೆ ಪ್ರಶ್ನೆ ಎತ್ತಲಾಗುವುದು ಎಂದು ತಿಳಿಸಿದರು.ಇದೇ ವೇಳೆ ಭ್ರಷ್ಟಾಚಾರ ವಿಚಾರ ಕುರಿತು ಮಾತನಾಡಿದ ಅವರು, ಹಣವಿಲ್ಲದೇ ಯಾವುದೇ ಕೆಲಸಗಳಾಗುತ್ತಿಲ್ಲ. ಕಾಮಗಾರಿ ಗುತ್ತಿಗೆ ಪಡೆಯಲು ಗುತ್ತಿಗೆದಾರರು ಅಧಿಕಾರಿಗಳಿಗೆ ಬಹಿರಂಗವಾಗಿ ಲಂಚ ನೀಡುತ್ತಿದ್ದಾರೆ. ಶಾಸಕರ ಮೇಲಿನ ಗೌರವ ಸಂಪೂರ್ಣ ಹಾಳಾಗಿದೆ. ಭ್ರಷ್ಟಾಚಾರವು ಬೇರುಬಿಟ್ಟಿದೆ, ಇದು ರಾಜ್ಯದ ಪ್ರಗತಿಯನ್ನು ಉಸಿರುಗಟ್ಟಿಸುತ್ತಿದೆ ಎಂದರು.

**ಅಧಿವೇಶನದಲ್ಲಿ ಕೃಷ್ಣಾ ಯೋಜನೆ, ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮೇಲೆ ಪರಿಣಾಮ ಬೀರುವ ತೀವ್ರ ಹಣಕಾಸಿನ ಬಿಕ್ಕಟ್ಟುಸ ನೀರಿನ ಯೋಜನೆಗಳಿಗೆ ಹಣದ ಕೊರತೆ, ಭ್ರಷ್ಟಾಚಾರ, ದುರಾಡಳಿತ, ಸರ್ಕಾರದ ನಿರ್ಲಕ್ಷದಿಂದ ರೈತರ ಹಾಗೂ ಅವರ ಮಕ್ಕಳ ಸಾವು ವಿಚಾರವನ್ನು ಪ್ರಮುಖವಾಗಿ ಪ್ರಸ್ತಾಪಿಸಲಾಗುತ್ತದೆ. ಅಧಿವೇಶನಲ್ಲಿ ಬಿಜೆಪಿ ಒಗ್ಗಟ್ಟು ಪ್ರದರ್ಶಿಸಲಿದೆ ಎಂದು ಹೇಳಿದರು.**

**ವಿಜಯೇಂದ್ರ ಅವರೂ ಬೆಂಬಲ ನೀಡಿದ್ದಾರೆ. ಯತ್ನಾಳ್ ಮತ್ತು ರಮೇಶ್ ಜಾರಕಿಹೊಳಿ ಅವರಂತಹ ಕೆಲವು ಸದಸ್ಯರ ಗೈರುಹಾಜರಿಯ ಹೊರತಾಗಿಯೂ, ಕಾಂಗ್ರೆಸ್ ವೈಫಲ್ಯವನ್ನು ಬಹಿರಂಗಪಡಿಸಲು ಪಕ್ಷವು ಒಗ್ಗಟ್ಟಾಗಿದೆ ಎಂದು ಅಶೋಕ್ ಒತ್ತಿ ಹೇಳಿದರು**

## ಬೆಳಗಾವಿ ಕೇಂದ್ರಾಡಳಿತ ಪ್ರದೇಶ ಎಂದು ಘೋಷಿಸಿ: ಆದಿತ್ಯ ಠಾಕ್ರೆ ಆಗ್ರಹ

